

# ‘ಆ್ಯಕ್ಷನ್ ಸಿನಿಮಾದಲ್ಲಿ ನಟಿಸುವಾಸೆ’

ರಂಗಭೂಮಿ ಹಿನ್ನೆಲೆಯಿಂದ ಬಂದಿರುವ ಅದ್ವಿಕಾ, ಲೂಸ್ ಮಾದ ಅಭಿನಯದ ‘ಕಿರಿಕ್ ಶಂಕರ್‘ ಸಿನಿಮಾದ ನಾಯಕಿ. ಆ್ಯಕ್ಷನ್ ಸಿನಿಮಾದಲ್ಲಿ ನಟಿಸುವ ಆಸೆ ಇಟ್ಟುಕೊಂಡಿರುವ ಅವರು ತಕ್ಕ ಅವಕಾಶಕ್ಕಾಗಿ ಎದುರು ನೋಡುತ್ತಿದ್ದಾರೆ.

■ ಪದ್ಮನಾಭ ಭಟ್

ತಂದೆಯ ಊರು ಧಾರವಾಡವಾದರೂ ಅದ್ವಿಕಾ ಹುಟ್ಟಿ ಬೆಳೆದಿದ್ದೆಲ್ಲ ಬೆಂಗಳೂರೇ. ಶಾಲೆಗೆ ಹೋದರೆ ಕ್ಲಾಸ್‌ರೂಮಿನಲ್ಲಿರುವುದಕ್ಕಿಂತ ಹೊರಗೆ ಸ್ನೇಹಬಳಗ ಕಟ್ಟಿಕೊಂಡು ಸಾಂಸ್ಕೃತಿಕ ಕಾರ್ಯಕ್ರಮಗಳಲ್ಲಿ ಪಾಲ್ಗೊಳ್ಳುವುದರಲ್ಲಿಯೇ ಹೆಚ್ಚಿನ ಆಸಕ್ತಿ ಇತ್ತು. ಈ ಆಸಕ್ತಿ ಕಾಲೇಜು ಮೆಟ್ಟಿಲು ಏರುತ್ತಿದ್ದ ಹಾಗೆಯೇ ಇನ್ನಷ್ಟು ಬಲಿಯಿತು. ಡಾನ್ಸ್, ಫ್ಯಾಷನ್ ಶೋಗಳಲ್ಲಿ ವೇದಿಕೆ ಏರಿದರೆ ಅದ್ವಿಕಾ ಸುತ್ತಲಿನ ಜಗತ್ತು ಮರೆಯುತ್ತಿದ್ದರು. ಈ ಸಮಯದಲ್ಲಿಯೇ ಅವರಿಗೆ ನಿರ್ದೇಶಕ ಬಿ.ಎಂ. ಗಿರಿರಾಜ್ ಪರಿಚಯವಾಗಿದ್ದು. ಅವರು ನಡೆಸಿಕೊಡುತ್ತಿದ್ದ ಒಂದು ನಟನಾವರ್ಕ್‌ಷಾಪ್‌ನಲ್ಲಿ ಭಾಗವಹಿಸಿದ ಅದ್ವಿಕಾ, ಗಿರಿರಾಜ್ ಅವರಿಂದ ಪ್ರಭಾವಿತರಾದರು. ಈಗಲೂ ಅವರು ಗಿರಿರಾಜ್ ಅವರನ್ನೇ ತಮ್ಮ ಗುರು ಎಂದು ಭಾವಿಸಿದ್ದಾರೆ. ಅದ್ವಿಕಾ ರಂಗಮಂಚವೇರಿದ್ದೂ ಗಿರಿರಾಜ್ ನಿರ್ದೇಶನದ ‘ಸುಗಂಧದ ಸೀಮೆಯಾಚೆ’ ಎಂಬ ನಾಟಕದ ಮೂಲಕವೇ.

ಒಮ್ಮೆ ರಂಗಭೂಮಿಯಲ್ಲಿ ನಟಿಸಿದ ಮೇಲೆ ನಾನು ಮಾಡಬೇಕಾಗಿರುವುದು ಇದೇ ಎಂದು ಅದ್ವಿಕಾಗೆ ಖಚಿತವಾಯಿತು. ಹಾಗಾಗಿ ತಮ್ಮ ಬದುಕನ್ನೂ ಇದೇ ಕ್ಷೇತ್ರದಲ್ಲಿ ಕಟ್ಟಿಕೊಳ್ಳಲು ನಿರ್ಧರಿಸಿದರು. ಒಂದು ವರ್ಷ ರಂಗಭೂಮಿಯಲ್ಲಿ ಹಲವು ನಾಟಕಗಳಲ್ಲಿ ಅಭಿನಯಿಸಿದರು. ನಂತರ ಕ್ಯಾಮೆರಾ ಎದುರಿಸಿದ್ದು ಗಿರಿರಾಜ್ ನಿರ್ದೇಶನದ ‘ರಕ್ತಚಂದನ’ ಎಂಬ ವೆಬ್ ಸೀರೀಸ್‌ನಲ್ಲಿ. ಹಿಂದಿಯಲ್ಲಿ ಮಾಡಿದ ಒಂದು ಕಿರುಚಿತ್ರದಲ್ಲಿಯೂ ಅವರು ಅಭಿನಯಿಸಿದರು.

ಅದ್ವಿಕಾ ಪೂರ್ಣಪ್ರಮಾಣದಲ್ಲಿ ನಾಯಕಿಯಾಗಿ ನಟಿಸಿದ್ದು ‘ಕಿರಿಕ್ ಶಂಕರ್’ ಸಿನಿಮಾದಲ್ಲಿ. ಎಂ.ಎನ್. ಕುಮಾರ್ ಅವರ ನಿರ್ದೇಶನದ ಈ ಸಿನಿಮಾದಲ್ಲಿ ಲೂಸ್ ಮಾದ ನಾಯಕನಾಗಿ ನಟಿಸುತ್ತಿದ್ದಾರೆ. ಈ ಚಿತ್ರಕ್ಕೆ ಅದ್ವಿಕಾ ನಾಯಕಿಯಾಗಿದ್ದು ಆಡಿಷನ್‌ನಲ್ಲಿ ಭಾಗವಹಿಸಿಯೇ.

‘ಕುಮಾರ್ ಅವ್ರು ಒಂದು ಸಿನಿಮಾ ಮಾಡ್ತಿದ್ದಾರೆ. ನಾಯಕಿ ಪಾತ್ರಕ್ಕಾಗಿ ಆಡಿಷನ್ ನಡೀತಿದೆ ಅಂತ ಗೊತ್ತಾಯ್ತು. ಹೋಗಿ ಭಾಗವಹಿಸಿದೆ. ಆಯ್ಕೆಯೂ ಆದೆ. ಆಮೇಲೆ ಸ್ಕ್ರಿಪ್ಟ್ ಓದಿದಾಗ ನನಗೆ ಸಿನಿಮಾ ಕಥೆ ಮತ್ತು ನನ್ನ ಪಾತ್ರ ಎರಡೂ ತುಂಬ ಇಷ್ಟವಾಯ್ತು. ಈ ಚಿತ್ರದ ನಾಯಕಿ ಬೋಲ್ಡ್. ಅಷ್ಟೇ ನೇರ ನಿಷ್ಠುರತೆ ಇರುವವಳು. ಯಾರಿಗೂ